ಕಳೆದ ದಿನಗಳಲ್ಲಿ ಅಪ್ಪ ನಿತ್ಯವೂ ಹೇಳುತ್ತಿದ್ದಂತೆ ತಾನು ಇನ್ನಷ್ಟು ಅಕ್ಷರ ಕಲಿಯಬೇಕಿತ್ತು ಅಂದುಕೊಂಡ ಪಳನಿ ಹೆಂಡತಿಗೆ, ನಿನಗೂ ಹಾಗೇ ಅನಿಸುತ್ತಿದೆಯೇ ಎಂದು ಕೇಳಿದ. ಸೆಲ್ವಿ, ಹೌದು ಅವ್ವ ಸ್ಕೂಲಿಗೆ ಹೋಗು, ಅಕ್ಷರ ಕಲಿ ಅಂತ ಯಾವಾಗಲೂ ತಲೆಗೆ ಮೊಟ್ಟುತ್ತಲೇ ಇದ್ದಳು, ಬೇಕಾದರೆ ತಲೆ ನೆತ್ತಿ ಮುಟ್ಟಿ ನೋಡು ಅಂದು ನಕ್ಕಳು. ಹಾಗೆ ಹೇಳುವಲ್ಲಿ ಸೆಲ್ವಿಗೆ ಗಂಡನು ತಲೆಯನ್ನು ಸ್ಪರ್ಶಿಸಲಿ, ನೇವರಿಸಲಿ ಎಂಬ ಅತೀವ ಮೋಹದ ಉಪಾಯವಿದ್ದಿತು. ಇಬ್ಬರಿಗೂ ಒಂದು ಘಳಿಗೆ, 'ಓ ದೇವರೇ, ಆ ಕುಣಿತದ, ಅಕ್ಷರ ಕಲಿಕೆಯ ದಿನಗಳು ಕಳೆದೇ ಹೋದವಲ್ಲ, ಮತ್ತೆ ಬರುವುದೇ ಇಲ್ಲವೆ' ಎಂಬ ಭಾವ ತೀವ್ರ ಥರದಲ್ಲಿ ಮೂಡಿ ಮಾಯವಾಯಿತು. ಅಷ್ಟಾದರೂ ಪರಸ್ಪರ ಏಕಾಂತ ಸಮ್ಮುಖದ ಸಂತಸದಲ್ಲಿ ಬಲವಾಗಿ ನುಲಿದುಕೊಂಡಿದ್ದ ಪಳನಿ, ಸೆಲ್ವಿಯರ ಕೈಕಾಲುಗಳಿಗೆ, ಇಡೀ ದೇಹಕ್ಕೆ, ಅಲ್ಲಿಂದ ಮನಸಿಗೆ, ಅದರ ಮುಂದಿನ ಅರಿವಿಗೆ ಎಲ್ಲಿಂದಲೋ ಭಾರೀ ಬಲ ಬಂದು ಕೂಡಿಕೊಂಡಂತಾಯಿತು.

ಹೋಟೆಲಿಂದ ಆಚೆಯ ಎತ್ತರೆತ್ತರದಲ್ಲಿ ನಿಂತ ಕಂಬಗಳ ತುದಿಯ ಹತ್ತಾರು ಹ್ಯಾಲೋಜಿನ್ ಲ್ಯಾಂಪುಗಳ ಭಾರೀ ಬೆಳಕಿನ ಸೆಳಕು ಕತ್ತಲ ಕೋಣೆಯ ಸಣ್ಣ ಕಿಟಕಿಯೊಳಗೆ ಬೆಳದಿಂಗಳಿನಂತೆ ತೂರಿ ಅದು ಸೆಲ್ವಿಯ ಮುಖದ ಮೇಲೂ ಬಿದ್ದಿರಲು, ಇದ್ದಕ್ಕಿದ್ದಂತೆ ಪಳನಿಗೆ ಅರೆ ನಾನು ಚೆನ್ನೈಗೆ ಬಂದಲ್ಲಿಂದ ಅಲ್ಲಿ ಇಲ್ಲಿ, ಎಲ್ಲೆಲ್ಲೋ ಎಡತಾಕಿ ಹಿಡಿಯಲೆತ್ನಿಸುತ್ತಿದ್ದ ಚಂದ್ರಬಿಂಬ ತನ್ನ ಎದುರೇ ಇಷ್ಟು ಸುಂದರವಾಗಿ ಕಾಣಿಸುತ್ತಿದೆಯಲ್ಲ ಅನಿಸಿಬಿಟ್ಟಿತು! ನಾಳೆಯಿಂದಲೇ ಸೆಲ್ವಿಯೊಂದಿಗೆ ಕೂಡಿ ತಾನು ಯಾವ ದುಡಿಮೆಗೆ ಕೈ ಹಚ್ಚಬೇಕೆಂದು ಯೋಚಿಸತೊಡಗಿದ. ಯಾಕೋ ಎಂತೋ ಅವರಿಬ್ಬರಿಗೂ ತಂದೆ ತಾಯಂದಿರನ್ನು ನೋಡಬೇಕೆನಿಸಿತು.

## ಕೃಷ್ಣಮೂರ್ತಿ ಹನೂರು

ಜಾನಪದ ತಜ್ಞ, ಕತೆಗಾರ, ಕಾದಂಬರಿಕಾರ ಕೃಷ್ಣಮೂರ್ತಿ ಹನೂರು ಮೈಸೂರು ವಿಶ್ವವಿದ್ಯಾಲಯದ ಡಾ. ಬಿ.ಆರ್. ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದಲ್ಲಿ (ಚಾಮರಾಜ ನಗರ) ಸಂದರ್ಶಕ ಪ್ರಾಧ್ಯಾಪಕರು. 'ಕೇರಿಗೆ ಬಂದ ಹೋರಿ', 'ಕತ್ತಲಲ್ಲಿ ಕಂಡ ಮುಖ', 'ಕಳೆದ ಮಂಗಳವಾರ ಮುಸ್ಸಂಜೆ' ಎಂಬ ಕಥಾಸಂಕಲನಗಳನ್ನು, 'ಬಾರೋ ಗೀಜಗನೆ', 'ನಿಕ್ಷೇಪ', 'ಅಜ್ಞಾತನೊಬ್ಬನ ಆತ್ಮಚರಿತ್ರೆ', 'ಸಿದ್ಧಿಯ ಕೈ ಚಂದ್ರನತ್ತ' ಎಂಬ ಕಾದಂಬರಿಗಳನ್ನು ಪ್ರಕಟಿಸಿದ್ದಾರೆ. ಅವರ ಪಿಎಚ್.ಡಿ. ಮಹಾಪ್ರಬಂಧ 'ಮ್ಯಾಸ ಬೇಡರು' ಬುಡಕಟ್ಟು ಅಧ್ಯಯನದ ಪುಸ್ತಕ ಇಂಗ್ಲಿಷ್‌ಗೆ ಭಾಷಾಂತರಗೊಂಡಿದೆ. ಜಾನಪದಕ್ಕೆ ಸಂಬಂಧಿಸಿದ ಹಲವಾರು ಕೃತಿಗಳನ್ನು ಸಂಪಾದಿಸಿದ್ದಾರೆ. 'ಕಾಲುದಾರಿಯ ಕಥನಗಳು' ಅವರ ಜಾನಪದ ಕ್ಷೇತ್ರ ಕಾರ್ಯದ ಅನುಭವ ಕಥನವಾಗಿದೆ. ಅವರ ಕುಮಾರವ್ಯಾಸ ಭಾರತ ಸಂಗ್ರಹ, 'ಸರಸ ಸೌಗಂಧಿಕದ ಪರಿಮಳ' ಪುಸ್ತಕ ಅಹರ್ನಿಶಿ ಪ್ರಕಾಶನದಿಂದ, ಕಾದಂಬರಿ 'ಕಾಲಯಾತ್ರೆ' ಅಂಕಿತ ಪುಸ್ತಕದಿಂದ ಇತ್ತೀಚೆಗೆ ಪ್ರಕಟವಾಗಿವೆ.